
ಕಡತಗೋಳಿಗಳನ್ನ ಕುಯ್ಯೋದರ ಮೂಲಕ ಭಾನ ತೀರಿಸಿದರು.

ಇಷ್ಟೆಲ್ಲ ಅವಾಂತರಕ್ಕೆ ಕಾರಣವಾಗಿರುವ ಅಂಡಬಂಡ ಹುಂಜನನ್ನು ಇನ್ನಿಲ್ಲವಾಗಿಸಬೇಕೆಂದು ಗಂಡ ಹೆಂಡ್ತಿ ಇಬ್ರೂ ತೀರ್ಮಾನಿಸಿದ್ದರಿಂದ, ಮಂಗನಳ್ಳಿ ಕೋಳಿ ನುಂಗಯ್ಯನ್ನ ಹುಡಿಕ್ಕಂಡು ರಂಗಯ್ಯ ಬೆಳಬೆಳಗ್ಗೆ ಹೋದ. ಈ ನುಂಗಯ್ಯನ ಹೆಸರಿಗೆ ಕೋಳಿ ಎಂಬುದು ಅಂಟೇ ಇದೆ ಯಾಕೆಂದರೆ, ವಾರಕ್ಕೆ ಮೂರುದಿನ ಈತ ನಾಟಿ ಕೋಳಿ ಬೇಕು ಎಂದು ಊರೂರು ಅಲೆಯುತ್ತಿದ್ದನು. ನೌಕರನಾಗಿದ್ದ ಈತ ತನಗೆ ಬರುವ ಸಂಬಳವನ್ನೆಲ್ಲ ಅಕ್ಕಪಕ್ಕದೂರಿನ ಕೋಳಿ ಕೊಳ್ಳಲಿಕ್ಕೇ ಖರ್ಚುಮಾಡುತ್ತಾನೆಂಬ ವದಂತಿ ಹಬ್ಬಿತ್ತು. ಹೆಚ್ಚು ಕಮ್ಮಿ ಸುತ್ತಮುತ್ತಲೂರಿನ ಕೋಳಿಗಳ ರಕ್ತ ಕುಡಿಯುವ ಭೂಪ ಇವನೇ ಎಂದು ಎಲ್ಲರೂ ಮಾತಾಡಿಕೊಳ್ಳುತ್ತಿದ್ದರು. ನುಂಗಯ್ಯ ಸ್ವತಃ ನೌಕರನಾಗಿದ್ದು, ಇವನ ಯೌವನದಲ್ಲಿ ನೌಕರಸ್ತ ಸಂಬಂಧವೊಂದು ಹುಡುಕಿ ಬಂದಿತ್ತಂತೆ. ಆದರೆ ಕೋಳಿ ಪ್ರಿಯ ನುಂಗಯ್ಯ ಮನೆ ತುಂಬ ಕೋಳಿ ಸಾಕಿರುವ ಕುಟುಂಬವೊಂದನ್ನು ಹುಡುಕಿ ಇದೇ ಆಗಬೇಕೆಂದು ಮಾಡಿಕೊಂಡಿದ್ದನಂತೆ. ಈತ ಮದುವೆಯಾದ ತಿಂಗಳೆರಡರಲ್ಲೇ ಹೆಂಡತಿ ಮನೆಯ ಪಿಳ್ಳೆ ಪಿಸ್ಕೆಗಳನ್ನೂ ಬಿಡದೆ ನರುಕಿ ಬಿಟ್ಟನಂತೆ. ಹೀಗೆ ನುಂಗಯ್ಯನ ಪವಾಡ ಎಲ್ಲೆಡೆಯೂ ಹಬ್ಬಿ ಕೋಳಿನುಂಗಯ್ಯ ಎಂದೇ ಪ್ರಸಿದ್ಧಿಗೆ ಬಂದಿದ್ದ.

ಇಂಥ ನುಂಗಯ್ಯನಿಗೆ ಇತ್ತೀಚೆಗೆ ನಾಟಿಕೋಳಿಗಳು ಸಿಗದಂತಾಗಿ ಅನಿವಾರ್ಯವಾಗಿ ಫಾರಂ ಬೈಲರ್ಕಡೆಗೆ ವಾಲುವಂತಾಗಿತ್ತು. ಕೋಳಿ ನುಂಗಯ್ಯ ಸೈಕಲ್ ಮೇಲೆ ಬರುತ್ತಿದ್ದನೆಂದರೆ 'ಕೋಳದವ' ಎಂದು ಎಲ್ಲಿ ಕೇಳುತ್ತಾನೊ ಎಂದು ಹಟ್ಟಿ ಹೆಂಗಸರುಗಳು ಬಾಗಿಲು ಹಾಕಿಕೊಳ್ಳುತ್ತಿದ್ದರು.

ಮಂಗನಳ್ಳಿಗೋದ ಅರ್ಧಗಂಟೆಯೊಳಗಾಗೆಲ್ಲ ಅದೇ ನುಂಗಯ್ಯನ ಸೈಕಲ್‌ನ ಹಿಂದಿನ ಸೀಟಿನಲ್ಲಿ ಕೂತು ರಂಗಯ್ಯನೂ ಬಂದಿಳಿದ. ಈ ಅಂಡ ಬಂಡ ಕೋಳಿಯ ಪವಾಡವನ್ನೆಲ್ಲ ಹೇಳಿಕೊಂಡೇ ಬಂದಿದ್ದನೇನೊ... ನುಂಗಯ್ಯ ಒಂದು ಉದ್ದನೆಯ ಬಲೆ ಸಮೇತ ಬಂದಿದ್ದ. ನುಂಗಯ್ಯ ಕೋಳಿ ತಿನ್ನುವುದರಲ್ಲಿ ಮಾತ್ರವಲ್ಲ, ಹಿಡಿಯುವುದರಲ್ಲೂ ನಿಸ್ಸೀಮ. ಹುಂಜ ಎರಡು ಮನೆಗಳಿರುವ ಈ ಸಂದಿಗೆ ಬಂದೇ ಬರುತ್ತಾನೆಂಬ ಊಹೆ ನುಂಗಯ್ಯನಿಗೆ ಸಿಕ್ಕ ನಂತರ ಅದೇ ಜಾಗಕ್ಕೆ ಬಲೆಯನ್ನು ಬಿಟ್ಟ. ರಂಗಮ್ಮರಂಗಯ್ಯರ ನೆರವನ್ನೂ ಪಡೆದು ಆಕಡೆ ಈಕಡೆಯಿಂದಲೂ ಹುಂಜನನ್ನು ಗದರಿಸಿಕೊಂಡು ಒಂದೇ ದಿಕ್ಕಿಗೆ ಅದು ಚಲಿಸುವಂತೆ ಯೋಜನೆ ರೂಪಿಸಿದ. ಅಂದುಕೊಂಡಂತೆ ಹುಂಜ ಎರಡು ಮನೆಗಳಿರುವ ಸಂದಿಯಲ್ಲೆ ಮೆಲ್ಲ ಮೆಲ್ಲನೆ ಹೆಜ್ಜೆ ಹಾಕುತ್ತ ಬಲೆ ಬಿಟ್ಟಿರುವ ಕಡೆಗೇ ಬರತೊಡಗಿತು. ನುಂಗಯ್ಯ ತನ್ನ ಎರಡೂ ಕೈಗಳನ್ನು ಮಾರುದ್ದ ಚಾಚಿ ಅದೇನಾದರೂ ಬಲೆಗೆ ಬೀಳದೆ ವಾಪಾಸ್ ತಿರುಗಿಕೊಂಡರೆ ಅಮುಕಿಬಿಡೋಣವೆಂದು ಹಿಂದಿಂದೆಯೇ ಬರುತ್ತಿದ್ದ. ಅಪಾಯದ ಸುಳಿವು ಸಿಕ್ಕಿದ್ದರಿಂದಲೋ ಏನೋ ಕತ್ತನ್ನ ಎತ್ತೆತ್ತಿ ನೋಡುತ್ತ



ಎಚ್ಚರಿಕೆಯ ಹೆಜ್ಜೆಗಳನ್ನು ಹಾಕುತ್ತಲೇ ಬಲೆಯ ಸಮೀಪದವರೆಗೂ ಬಂದ ಹುಂಜ ಕತ್ತನ್ನು ಅತ್ತಿತ್ತ ಆಡಿಸಿ, ನೆಟ್ಟಗೆ ನೋಡುತ್ತ, ರೆಕ್ಕೆಯನ್ನು ಬಿಚ್ಚಿ ಕೊಕ್ಕೊಕ್ಕೊ ಎಂದು ಚಂಗನೆ ಜಿಗಿದು ಬಲೆಯನ್ನೂ ಮೀರಿ ಹೆಂಚಿನ ಮೇಲೆ ಹತ್ತಿ ಕ್ಷಣಮಾತ್ರದಲ್ಲಿ ತಪ್ಪಿಸಿಕೊಂಡುಬಿಟ್ಟಿತು.

ನುಂಗಯ್ಯ ಇಂಥ ಪಾಪ್ರುಗೋಳಿನ ನಾನೆಲ್ಲು ಕಂಡಿಲ್ಲ ಎಂದು ಮಧ್ಯಾಹ್ನದವರೆಗೂ ಹುಡುಕಿದನಾದರೂ ಎಲ್ಲೂ ಪತ್ತೆಯಾಗದ ಕಾರಣಕ್ಕೆ ಹೊಟ್ಟೆ ಚುರುಕ್ ಎಂದು ಬಲೆ ಬಿಚ್ಚಿ ಸೈಕಲ್‌ಗೆ ಇಕ್ಕಿಕೊಂಡು ಹೊರಟೇ ಹೋದ.

ಕೋಳಿ ಚಿಂತೆಯಲ್ಲೇ ಮಲಗಿದ್ದ ರಂಗಯ್ಯನಿಗೆ ಆ ರಾತ್ರಿಯೊಂದು ಕನಸು ಬಿತ್ತು. ಆ ಕನಸಿನಲ್ಲಿ ಇಪ್ಪತ್ತು ವರ್ಷಗಳ ಕೆಳಗೆ ಸತ್ತ ತನ್ನಕ್ಕ ಬಂದಿದ್ದಳು. ಈ ಹಿರಿಯಕ್ಕ ಬೇರೆ ಯಾರೂ ಅಲ್ಲ. ಇನ್ನೂ ಮೊಲೆಕುಡಿಯುತ್ತಿದ್ದ ಹಸುಕಂದನನ್ನು ಬಿಟ್ಟು ಅವ್ವ ಸತ್ತಾಗ, ಯಾರದೋ ಮನೆಯಲ್ಲಿ ಜೀತಕ್ಕಿದ್ದ ಅಕ್ಕ, ತಮ್ಮನನ್ನು ಹಾಲುಯ್ದುಕೊಂಡು ಸಾಕಿದ್ದಳು. ತಂದೆ ಸ್ಥಾನದಲ್ಲಿ ನಿಂತು 'ರಂಗಯ್ಯ' ಎಂದು ನಾಮಕರಣ ಮಾಡಿದ್ದವಳೂ ಇದೇ ಅಕ್ಕ. ಬೆಳೆಯುತ್ತ ಬದುಕುತ್ತ ಹೋದಂತೆಲ್ಲ ಅಕ್ಕ ತಮ್ಮ ಬಡತನವಿದ್ದರೂ ತಮಗಿರುವಷ್ಟರಲ್ಲೇ ಒಬ್ಬರಿಗೊಬ್ಬರು ನೆರವಾಗುವುದು ಇದ್ದೇ ಇತ್ತು. ಇಂಥದ್ದೇ ಸಂದರ್ಭದಲ್ಲಿ ಅಕ್ಕನನ್ನು ಕೊಟ್ಟು ಮದುವೆ ಮಾಡಿದ್ದರೂ ತಮ್ಮ ಒಮ್ಮೆ ಕೆಟ್ಟು ಬಂದಾಗ ಏನೂ ಇಲ್ಲ ಎಂದು ಬರಿಗೈಲಿ ಕಳುಹಿಸದೆ ಮಂಕ್ರಿಯಲ್ಲಿ ಕವುಚಿದ್ದ ಅಂಡ ಬಂಡ ಬಣ್ಣದ ಮರಿಗೋಳಿಯೊಂದನ್ನ ಕೊಟ್ಟು ಕಳುಹಿಸಿದ್ದಳು. ಈ ಮರಿಗೋಳಿಯೇ ಹತ್ತಾಗಿ ನೂರಾಗಿ ತನ್ನ ಸಂತತಿಯನ್ನ ವಿಸ್ತರಿಸಿಕೊಂಡಿತ್ತು. ಹತ್ತಾರು ವರ್ಷಕಳೆದರೂ ಅದರ ಸಂತತಿ ಹಾಗೇ ಉಳಿದಿತ್ತು. ಹಲವು ಮಾರ್‍ನಾಮಿ, ಜಾತ್ರೆಗಳನ್ನು ಮಾಡಿಸಿ ಸರೀಕರೆದುರು ಸಮನಾಗಿ ನಿಲ್ಲುವಂತೆ ಮಾಡಿತ್ತು. ಅದರ ಸಂತತಿಗಳೇ ಸಂತೆಯಲ್ಲೂ ಮಾರಾಟವಾಗಿ ನಾಕಾರು ಪುಡಿಗಾಸಿಗೂ ಅವಕಾಶವಾಗಿ ಮಕ್ಕಳ ಪೆನ್ನು ಪುಸ್ತಕಕ್ಕೂ ದಾರಿಯಾಗಿತ್ತು. ಇಂಥ ಅಕ್ಕ ವಯೋಸಹಜವಾಗಿ ತೀರೋದಳಾದರೂ ಅಕ್ಕ ಕೊಟ್ಟ ಕೋಳಿಯ ಸಂತತಿ ಮಾತ್ರ ತಮ್ಮನ ಮನೆಯಲ್ಲಿ ಕಾವು ಕುಂತೇ ಇತ್ತು.

ರಂಗಯ್ಯನ ಮಕ್ಕಳು ಮರಿಗಳು ಓದಿ ದೊಡ್ಡವರಾಗಿ ಸರ್ಕಾರಿ ನೌಕರಿ ಹಿಡಿಯುವಷ್ಟು ಮುಂದುವರೆದರು. ರಂಗಯ್ಯನಿಗಿದ್ದ ಕಷ್ಟ ಮಕ್ಕಳ ಕಾಲಕ್ಕೆ ಇಲ್ಲವಾಯಿತು. ಮಕ್ಕಳು ಊಟ ಬಟ್ಟೆ ತೊಟ್ಟುಕೊಂಡು ದುಂಡಗಾದ ನಂತರ ರಂಗಯ್ಯನಿದ್ದ ಹಳೆ ಮನೆಯನ್ನು ಕೆಡವಿ ಹೊಸದಾಗಿ ಕಟ್ಟಲು ಶುರುವಾದರು. ನಾಯಿ ಕೋಳಿ ದನಗಳಿಗೂ ಆಶ್ರಯವಾಗಿದ್ದ ರಂಗಯ್ಯನ ಹಳೆ ಮನೆಯನ್ನು ಕೆಡವಿ ಲಕ್ಷಾಂತರ ಬಂಡವಾಳ ಹೂಡಿ ಹೊಸ ಥಾರ್‍ಸಿ ಮನೆ ಕಟ್ಟಿದರು. ಈ ಕೋಳಿಗಳೋ ಅವಕ್ಕೆ ಹೊಸಮನೆ ಹಳೆ ಮನೆಯೆಂಬುದು ಲೆಕ್ಕವೇ. ಎಲ್ಲೆಂದರಲ್ಲಿ ಹೇಲುವುದೊಂದೇ ಅವರ ಸಡಗರ. ಮಾಮೂಲಿ ಅವುಗಳು ಕೂರುತ್ತಿದ್ದ ಕೊಣಬೇವಿನ ಮರವಿದ್ದರೆ ಅಲ್ಲೆ ಕೂರುತ್ತಿದ್ದವೇನೊ, ಆದರೆ ಹೊಸಮನೆ ಕಟ್ಟಡಕ್ಕೆ ಕೊಣಬೇವಿನ ಮರವೂ ಬಲಿಯಾಗಿತ್ತು. ಆದ್ದರಿಂದ ಈಗ ಕೋಳಿಗಳು ಹೊಸ ಮನೆಯ ಕಾಂಪೌಂಡ್ ಮೇಲೆ, ಮಹಡಿಮೇಲೆ ಕೂರುವುದು, ಹೇಲುವುದು ಮಾಡತೊಡಗಿದವು. ಇದೇ ಕಾರಣಕ್ಕೆ ರಂಗಯ್ಯ ಮತ್ತವನ ಕಿರಾತಕ ಮಗನ ನಡುವೆ ವಾಗ್ವಾದ ನಡೆದೇ ಇತ್ತು. 'ನಾನು ಮನೆ ಕಟ್ಟಿಸಿರುವುದು ಕೋಳಿ ನಾಯಿಗಳಿಗಲ್ಲ, ಮನುಷ್ಯರಿಗಾಗಿ. ಹಾಗಾಗಿ ಇಲ್ಲಿ ಮನುಷ್ಯರಿಗಷ್ಟೆ ಅವಕಾಶ' ಎಂದು ಯಾವಾಗಲೂ ಕಾರಿಕೊಳ್ಳುತ್ತಿದ್ದ. ಇದನ್ನು ಕಂಡ ರಂಗಯ್ಯ ಮತ್ತು ರಂಗಮ್ಮ ಒಂದೊಂದಾಗಿ ಕೋಳಿಗಳನ್ನು ಕಳೆಯಲು ಮುಂದಾದರು. ಕಟ್ಟ ಕಡೆಗೆ ಉಳಿದಿದ್ದು ಈ ಅಂಡಬಂಡ ಹುಂಜನೊಬ್ಬನೆ. ಇವನನ್ನೂ ಕಳೆಯಬೇಕೆಂದು ಮನಸ್ಸು ಮಾಡಿದರೂ ಈ ಹುಂಜದ ಕಿಲಾಡಿತನದಿಂದ ಅದು ತಪ್ಪಿಸಿಕೊಂಡು ಹೋಗುತ್ತಲೇ ಬಂದಿತ್ತು. ಕಾಲನ ಅಂತರದಲ್ಲಿ ಸ್ವತಃ ರಂಗಯ್ಯನಿಗೇ ತನ್ನಕ್ಕನಿಂದ ಬಳುವಳಿಯಾಗಿ ಬಂದಿದ್ದ ಈ ಕೋಳಿ ಸಂತತಿ ಮರೆವಿಗೆ ಸರಿದಿತ್ತು. ಆದರೆ ರಾತ್ರಿ ಕನಸಿನಲ್ಲಿ ಬಂದ ಅಕ್ಕನಿಂದಾಗಿ ಮತ್ತೆ ಇದೆಲ್ಲವೂ ರಂಗಯ್ಯನ ನೆನಪಿಗೆ ಒತ್ತರಿಸಿಕೊಂಡು ಬಂದವು.

ಕನಸಿನಿಂದ ಎಚ್ಚರಗೊಂಡ ರಂಗಯ್ಯನಿಗೆ ಈ ಕೂಡಲೇ ಆ ಹುಂಜನನ್ನು ನೋಡಬೇಕೆನಿಸಿತು. ಆದರೆ ಇಷ್ಹೊತ್ತಿನಲ್ಲಿ ಎಲ್ಲೋಗಿ ಹುಡುಕುವುದು? ಎಲ್ಲಿ ಕೂತಿರುತ್ತೊ ಏನೊ? ತನಗೆ ಕಾಣೆಸಿಕೊಂಡ ಅಕ್ಕನ ಕುರಿತು ಮಧ್ಯರಾತ್ರಿಯೇ ಹೆಂಡ್ತಿ ರಂಗಮ್ಮನನ್ನು ಎಬ್ಬಿಸಿಕೊಂಡು ಬಿದ್ದ ಕನಸನ್ನು ಹೇಳತೊಡಗಿದ. ರಂಗಮ್ಮ ಕಳೆದ ವರ್ಷ ಇದೇ ಟೈಮಿನಲ್ಲಿ ದೇವರಿಗೆ ಎಡೆಮಾಡಲೆಂದು ಕೋಳಿ ಹಿಡಿದುಕೊಂಡಿದ್ದಾಗ ಇದು ಏನು ಮಾಡಿದರೂ ಕತ್ತು ಕೊಡವದೆ ಇದ್ದುದು, ಕತ್ತು ಕೊಡವದ ಕೋಳಿ ಕುಯ್ದರೆ ಅಪಚಾರವೆಂದು ಬಿಟ್ಹೋಡಿಸಿದ್ದ ನೆನಪನ್ನು ಹಂಚಿಕೊಂಡಳು.

ಬೆಳಗಾಯಿತು. ಬಾಗಿಲು ತೆಗೆದು ಆಚೆ ಬಂದ ರಂಗಯ್ಯನಿಗೆ ಮೊದಲು ಕಂಡದ್ದು ಅದೇ ಮುಕ್ಕು ಜುಟ್ಟಿನ ಅಂಡಬಂಡ ಹುಂಜ. ಯಾಕೋ ಮೊದಲಷ್ಟು ಪೊಗರಾಗಿ ಕಾಣೆಸಲಿಲ್ಲ. ರಾತ್ರಿ ಸುರಿದ ಮಳೆಗೆ ನೆಂದಿರುವಂತಿತ್ತು. ತಾನಾಗೇ ಶರಣಾಗತಿ ಬಯಸಿ ಬಂದಿರುವಂತೆ ನಿಂತಲ್ಲೇ ನಿಂತಿತ್ತು.

ಪ್ರತಿಕ್ರಿಯಿಸಿ: feedback@sudha.co.in